ಅಮೆರಿಕದ ವಾಯುವ್ಯ ದಿಕ್ಕಿನಲ್ಲಿರುವ ವಾಷಿಂಗ್ಟನ್ ರಾಜ್ಯದಲ್ಲಿನ ಸಿಯಾಟಲ್ ನಗರದ್ದು ವಿಶ್ವಪ್ರಸಿದ್ಧಿ. ಸಾಫ್ಟ್‌ವೇರ್ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮಗನೋ ಮಗಳೋ ಸಿಯಾಟಲ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವ ತಾಯಿ ತಂದೆಯರು ನಮ್ಮ ನಡುವೆ ಇದ್ದಾರೆ. ಮೈಕ್ರೋಸಾಫ್ಟ್, ಗೂಗಲ್, ಅಮೆಜಾನ್ ಮುಂತಾದ 'ಮಾಹಿತಿ ತಂತ್ರಜ್ಞಾನ'ಕ್ಕೆ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಸಂಬಂಧಿಸಿದ ಕಂಪನಿಗಳು ಸಿಯಾಟಲ್‌ನಲ್ಲಿ ತಳವೂರಿವೆ. ಆದರೆ, ಮಾಹಿತಿ ತಂತ್ರಜ್ಞಾನ ಕಂಪನಿಗಳು ಅಲ್ಲಿ ಕಾರ್ಯಾರಂಭ ಮಾಡುವುದಕ್ಕೆ ಸಾಕಷ್ಟು ಮೊದಲೇ ಸಿಯಾಟಲ್‌ನ ಹತ್ತಿರದ ಎವರೆಟ್‌ನಲ್ಲಿ ವಿಶ್ವವಿಖ್ಯಾತ ವಿಮಾನ ನಿರ್ಮಾಣ ಸಂಸ್ಥೆ 'ಬೋಯಿಂಗ್' ದೊಡ್ಡ ವಿಮಾನವೊಂದನ್ನು ನಿರ್ಮಿಸುವ ಸಲುವಾಗಿ ಒಂದು ಬೃಹತ್ ಫ್ಯಾಕ್ಟರಿಯನ್ನು ಸುಮಾರು 55 ವರ್ಷಗಳ ಹಿಂದೆಯೇ ನಿರ್ಮಿಸಿತ್ತು. ಆ ದಿನಗಳಲ್ಲಿ ವಿಮಾನಯಾನದ ಬಗ್ಗೆ ಭಾರತದಲ್ಲಿ ಹೆಚ್ಚಿನ ಅರಿವಿರಲಿಲ್ಲ. ಸಾಮಾನ್ಯರಿಗಂತೂ ವಿಮಾನಯಾನ ಗಗನಕುಸುಮವಾಗಿತ್ತು.

ಈಗ ಕಾಲ ಬದಲಾಗಿದೆ. ಭಾರತದ ಅನೇಕ ವಿಮಾನನಿಲ್ದಾಣಗಳಲ್ಲಿನ ಜನಸಂದಣಿ, ರೈಲು ಹಾಗೂ ಬಸ್ ನಿಲ್ದಾಣಗಳಲ್ಲಿನ ಜನಸಂದಣಿಯೊಂದಿಗೆ ಸ್ಪರ್ಧಿಸುವಂತಿದೆ. ಇಂದು ಅಂತರರಾಷ್ಟ್ರೀಯ ಪ್ರಯಾಣದೊಂದಿಗೇ ನಮ್ಮ ದೇಶದೊಳಗಿನ ಪ್ರಯಾಣಕ್ಕಾಗಿ ಶರವೇಗದಲ್ಲಿ ಧಾವಿಸುವ ವಿಮಾನಗಳನ್ನು ಅವಲಂಬಿಸುವುದು ಅನೇಕರಿಗೆ ಸಾಮಾನ್ಯವಾಗಿದೆ. ಬೆಂಗಳೂರಿನಲ್ಲಿ ವಿಮಾನವನ್ನು ಹತ್ತಿ, ಸುಮಾರು 16 ಗಂಟೆಗಳ ನಂತರ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ನೇರವಾಗಿ ಇಳಿಯುವ ದಿನಗಳಿವು. ಅಂತೂ ವಿಮಾನಪ್ರಯಾಣ ಇಂದು ಭಾರತದ ಲಕ್ಷಾಂತರ ಜನರ ಕೈಗೆಟುಕಿದೆ. ಹೀಗಾಗಿ ವಿಮಾನಗಳ ಬಗ್ಗೆ ಆಸಕ್ತಿ ಹಾಗೂ ಅರಿವು ಹೆಚ್ಚುತ್ತಿದೆ. ನಮ್ಮ ಕೈಗೆಟುಕದ ಅವುಗಳನ್ನು ಕಟ್ಟಿಕೊಂಡು ನಮಗೇನಾಗಬೇಕಾಗಿದೆ ಎಂಬ ಉದಾಸೀನ ಮರೆಯಾಗುತ್ತಿದೆ.

ಇಂದು ಯಾವುದೇ ಒಂದು ಸಮಯದಲ್ಲಿ ಜಗತ್ತಿನಾದ್ಯಂತ ಒಟ್ಟಾಗಿ ಸುಮಾರು ಎಂಟರಿಂದ ಒಂಬತ್ತು ಸಾವಿರ ಪ್ರಯಾಣಿಕ ವಿಮಾನಗಳು ಹಾರುತ್ತಿರುತ್ತವೆಂದು ಅಂದಾಜು ಮಾಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ...

ಡಿಸೆಂಬರ್ 6, 2022. ಎವರೆಟ್‌ನಲ್ಲಿರುವ ಬೋಯಿಂಗ್ ಕಂಪನಿಯ ಕಾರ್ಖಾನೆಯಲ್ಲಿ, ಬಹುಮಟ್ಟಿಗೆ ಸಂಪೂರ್ಣವಾಗಿ ನಿರ್ಮಾಣವಾದ ಬೃಹತ್ ವಿಮಾನವೊಂದನ್ನು ಟ್ರ್ಯಾಕ್ಟರ್ ಒಂದು ನಿಧಾನವಾಗಿ ಎಳೆದುಕೊಂಡು ಅಲ್ಲಿಂದ ಆಚೆ ಬಂದಿತು. ಆ ದೃಶ್ಯವನ್ನು ವೀಕ್ಷಿಸಲು, ಆ ವಿಮಾನವನ್ನು ಬೀಳ್ಕೊಡಲು, ಫ್ಯಾಕ್ಟರಿಯಲ್ಲಿನ ನೂರಾರು ಜನ ನೆರೆದಿದ್ದರು. ಎಲ್ಲರಲ್ಲೂ ಒಂದು ಬಗೆಯ ವಿಷಾದದ ಛಾಯೆ. ಕೆಲವರ ಕಣ್ಣಲ್ಲಿ ನೀರು. ಹಿಂದೆ ನೂರಾರು ಬಾರಿ, ಇಂತಹ ವಿಮಾನಗಳು ಆ ಬೃಹತ್ ಕಟ್ಟಡದಿಂದ ಹೊರಬಂದಾಗ, ಈ ಬಗೆಯ ಉದ್ವೇಗ ಉಂಟಾಗಿರಲಿಲ್ಲ. ಆದರೆ, ಈ ಬಾರಿ ಏಕೆ ಈ ಭಾವುಕ ಬೀಳ್ಕೊಡುಗೆ?

ಆ ಭಾವೋದ್ವೇಗಕ್ಕೆ ಕಾರಣವಿತ್ತು. ಆ ಬಗೆಯ ವಿಮಾನಗಳಲ್ಲಿ ಅದೇ ಕೊನೆಯದು. ಆ ವಿಮಾನದ ನಿರ್ಮಾಣ ಸಂಪೂರ್ಣವಾಗುವುದರೊಂದಿಗೆ, ಐದು ದಶಕಗಳಿಗೂ ಹಿಂದೆ ಆರಂಭವಾಗಿದ್ದ ಆ ಬಗೆಯ ವಿಮಾನಗಳ ನಿರ್ಮಾಣ ಸ್ಥಗಿತವಾಯಿತು. ಜಾಗತಿಕ ವಿಮಾನಯಾನ ಕ್ಷೇತ್ರದ ಗತಿಯನ್ನೇ ಬದಲಿಸಿದ ಆ ವಿಮಾನಕ್ಕೆ ಜಗತ್ತಿನ ಸುದ್ದಿಮಾಧ್ಯಮಗಳು ತಮ್ಮ ನಮನವನ್ನು ಸಲ್ಲಿಸಿದವು.

ಇಂದು ಅದೆಷ್ಟೋ ಬಗೆಯ ಪ್ರಯಾಣಿಕ ವಿಮಾನಗಳು ಬಳಕೆಯಲ್ಲಿವೆ. ಅನೇಕ ವಿಮಾನಗಳು ವರ್ಷಗಟ್ಟಲೆ ಸೇವೆ ಸಲ್ಲಿಸಿ ನೇಪಥ್ಯಕ್ಕೆ ಸರಿದಿವೆ. ಹಾಗಾದರೆ ಈ ವಿಮಾನದ್ದೇನು ವಿಶೇಷ? ಇಷ್ಟಕ್ಕೂ ಈ ವಿಮಾನ ಯಾವುದು? ಅದುವೇ 'ಬೋಯಿಂಗ್ 747' ಜಂಬೋ ಜೆಟ್'. ಇದಕ್ಕಿರುವ ಇನ್ನೊಂದು ಹೆಸರು, 'ಕ್ವೀನ್ ಆಫ್ ದ ಸ್ಕೈಸ್' (ಆಗಸದ ರಾಣಿ).

## ಜಂಬೋ ಜೆಟ್‌ನ ವಿಶೇಷವೇನು?

ವಿಮಾನಯಾನದ ಸ್ವರೂಪವನ್ನು, ಆಧುನಿಕ ಜಗತ್ತು ಜೋಡಣೆಗೊಂಡಿರುವ ಬಗೆಯನ್ನು, ಜಗತ್ತಿನ ಆರ್ಥಿಕತೆಯ ಅನೇಕ ಶಾಖೆಗಳನ್ನು ಮಹತ್ತರವಾದ ರೀತಿಯಲ್ಲಿ 'ಬೋಯಿಂಗ್ 747' ವಿಮಾನ ಬದಲಿಸಿತೆನ್ನುವುದು ನಿಸ್ಸಂಶಯ. ಒಂದು ಕಾಲದಲ್ಲಿ ಕೇವಲ ಶ್ರೀಮಂತರಿಗೆ ಹಾಗೂ ಖ್ಯಾತ ವ್ಯಕ್ತಿಗಳಿಗೆ ಸೀಮಿತವಾಗಿದ್ದ ವಿಮಾನಯಾನದ ಅನುಕೂಲಗಳನ್ನು, ಅಂದರೆ ಸಾವಿರಾರು ಕಿಲೋಮೀಟರ್ ದೂರವಿರುವ ಸ್ಥಳಗಳಿಗೆ ವೇಗವಾಗಿ ಹಾಗೂ ಸುಖವಾಗಿ ಪಯಣಿಸುವುದನ್ನು, ಶ್ರೀಸಾಮಾನ್ಯನಿಗೂ ವಿಸ್ತರಿಸಿದ್ದು ಇದೇ ವಿಮಾನ. ಇಂದು ವಿಮಾನಯಾನ ಸಾಮಾನ್ಯರ ಕೈಗೆಟಕುವುದರಲ್ಲಿ 'ಬೋಯಿಂಗ್ 747' ಪಾತ್ರ ಮಹತ್ತರವಾದುದಾಗಿದೆ. ಈ ಕಾರಣದಿಂದಾಗಿಯೇ ಇದಕ್ಕೆ ವಿಮಾನಯಾನದ ಇತಿಹಾಸದಲ್ಲಿ ಒಂದು ಶಾಶ್ವತವಾದ ಸ್ಥಾನವಿದೆ.

ಧರೆಯಿಂದ ದೊಡ್ಡ ವಿಮಾನವೊಂದು ಶ್ರಮಪಡದೇ ಮುಗಿಲಿಗೇರುವ ದೃಶ್ಯ ವಾರ್ತೆ,

ಆ ವಿಮಾನವನ್ನು ಬೀಳ್ಕೊಡಲು, ಫ್ಯಾಕ್ಟರಿಯಲ್ಲಿನ ನೂರಾರು ಜನ ನೆರೆದಿದ್ದರು. ಎಲ್ಲರಲ್ಲೂ ಒಂದು ಬಗೆಯ ವಿಷಾದದ ಛಾಯೆ. ಕೆಲವರ ಕಣ್ಣಲ್ಲಿ ನೀರು.



